ಎನ್ನುವ ಹೊತ್ತಿಗೆ, ಇನ್ನೊಂದು ವೈರಾಣು ಬಂದು ಜನರನ್ನು ಹೈರಾಣು ಮಾಡುತ್ತಿದೆ!

ಈ ಬಗ್ಗೆಯೇ ಯೋಚನೆ ಮಾಡುತ್ತಾ ಬರುತ್ತಿದ್ದೆ. ಹಿರಿಯರೊಬ್ಬರು ಎದುರಾದರು. ''ನಮಸ್ಕಾರ ರಾಯ್ರೇ. ಹೇಗಿದೀರಿ?'' ಎಂದು ಕೇಳಿದೆ. ''ಏನೋ ಇದೀನಪ್ಪಾ, ಈ ಹಾಳು ವಾತ 'ಶನೇಶ್ವರ ಹೋದ್ಯಾ ಅಂತ ಸಮಾಧಾನ ಪಟ್ಕೊಂಡ್ರೆ, ಇಗೋ ಬಂದೆ ಗವಾಕ್ಷಿಯಿಂದ' ಅಂತ ಮತ್ತೆ ವಕ್ರಿಸೇ ಬಿಡ್ತು, ಪ್ರಾರಬ್ಧ'' ಅಂದರು ! ಅವರ ವಾತದ ಸಮಸ್ಯೆಗೂ ಈ ಗಾದೆ ಚೆನ್ನಾಗಿಯೇ ಅನ್ವಯವಾಗಿತ್ತು. ''ಚಳಿಗಾಲ ಅಲ್ವೇ ರಾಯ್ರೇ? ಸರಿಯಾಗುತ್ತೆ. ಯೋಚನೆ ಮಾಡ್ಬೇಡಿ'' ಎಂದು ಸಮಾಧಾನ ಹೇಳಿ ಮುನ್ನಡೆದೆ.

ಫೇಲಾಗಿ ಮತ್ತೆ ಮತ್ತೆ ಅದೇ ತರಗತಿಗೆ ಹಾಜರಾಗುತ್ತಿದ್ದ ವಿದ್ಯಾರ್ಥಿಯನ್ನು ಕಂಡಾಗ ''ಅಗೋ, ಶನೇಶ್ವರ ತೊಲಗಿತೂಂದ್ರೆ ಇಗೋ ಬಂದೆ ಗವಾಕ್ಷಿಯಿಂದ ಅಂತ ತಿರ್ಗಾ ಬಂದ ಶನಿ'' ಅಂತ ನಮ್ಮ ಕನ್ನಡ ಮಾಸ್ಟ್ರು ಹೇಳುತ್ತಿದ್ದ ಮಾತು ನೆನಪಾಯಿತು. ಪುನರಪಿ ಅದದೇ ತರಗತಿಗೆ ಹಾಜರಾಗುತ್ತಿದ್ದ ಆತ, ನನ್ನ ಅಣ್ಣನಿಗೂ ಕ್ಲಾಸ್‌ಮೇಟು, ನನಗೂ ಕ್ಲಾಸ್‌ಮೇಟು, ನನಗಿಂತ ಕಿರಿಯ ನಮ್ಮ ಪಕ್ಕದ ಮನೆಯ ರಂಗನಿಗೂ ಕ್ಲಾಸ್‌ಮೇಟು! ಕನ್ನಡ ಪಂಡಿತರಿಂದ ಶನೇಶ್ವರ ಅನ್ನಿಸಿಕೊಂಡ ಆ ವ್ಯಕ್ತಿ ಕೊನೆಗೆ ರಾಜಕೀಯ ಸೇರಿದ. ಮುನಿಸಿಪಾಲಿಟಿಯಿಂದ ಶುರು ಮಾಡಿ, ಕೊನೆಗೆ ರಾಜ್ಯದ ಸಚಿವನೂ ಆಗಿಬಿಟ್ಟ! ಕನ್ನಡ ಮಾಸ್ಟರು ರಿಟೈರ್ ಆಗೋಕೆ ಮೊದಲು ಹೆಡ್ ಮಾಸ್ಟರ್ ಆಗಿದ್ದೇ ದೊಡ್ಡ ವಿಷಯ!

ನಮ್ಮ ಹೊಳೆ ಬದಿ ಸೋಮಾರಿ ಕಟ್ಟೆಯ ಸಂಘದಲ್ಲೂ ಒಮ್ಮೆ ಈ ಗಾದೆ ಮಾತು ಪ್ರಸ್ತಾಪವಾಗಿತ್ತು. ''ನೋಡ್ರೋ, ಮುದಿ ಗೂಬೆಗಳು ತೊಲಗಿದವು ಅಂದುಕೊಂಡಿದ್ದೆ. ಹೋದ್ಯಾ ಪಿಶಾಚಿ ಅನ್ನೋ ಹೊತ್ಗೆ ಬಂದೇ ಬಿಟ್ವೆ ಗವಾಕ್ಷಿಯಿಂದ ಅಂತ ವಾಪಸ್ ಬಂದುಬಿಟ್ವು'' ನಮ್ಮ ಸಂಘದ ಸೀನಿಯರ್ ಮೆಂಬರುಗಳ ಬಗ್ಗೆ ಕಿರಿಯ ಮೆಂಬರು ಒಬ್ಬ ಹೇಳಿದ ಮಾತಿದು. ಮು.ಗೂ.ಗಳನ್ನೆಲ್ಲಾ ಹೊರಗೆ ಹಾಕಿ ಯುವಕರ ಸಂಘ ಮಾಡಬೇಕೆಂಬುದು ಅವನ ಆಸೆಯಾಗಿತ್ತಂತೆ. ಎಷ್ಟೇ ಆದರೂ ಸೀನಿಯರ್‌ಗಳು. ತಾವೇ ಕಟ್ಟಿದ ಸಂಘವನ್ನು ಅಷ್ಟು ಸುಲಭವಾಗಿ ಬಿಟ್ಟಾರೆಯೇ?! ಹೀಗೆ ಹೋದ ಹಾಗೆ ಮಾಡಿ ಮತ್ತೆ ಬಂದು ಸಂಘವನ್ನು ಸೇರಿಕೊಂಡರು! ಮು.ಗೂ.ಗಳು ತೊಲಗದೆ ಇದ್ದುದು ಅವನು ಈ ಗಾದೆಯನ್ನು ಉಪಯೋಗಿಸಲು ಕಾರಣವಾಗಿತ್ತು.

ಮಾಧ್ಯಮಗಳಲ್ಲಿ ವರದಿಯಾದ ಕೆಲವು ಸುದ್ದಿಯ ತುಣುಕುಗಳನ್ನು ನೋಡಿದರೆ ಈ ಗಾದೆ ಎಷ್ಟು ಸರ್ವೇ ಸಾಮಾನ್ಯವಾಗಿ ಬಳಕೆಯಾಗುತ್ತದೆ ಎಂದು ತಿಳಿಯುತ್ತದೆ.

''ಹೋದ್ಯಾ ಪಿಶಾಚಿ ಅಂದ್ರೆ ಬಂದೆ ಗವಾಕ್ಷೀಲಿ ಅನ್ನೋ ರೀತಿ ಕೋವಿಡ್ ಮುಗಿಯುವ ಸೂಚನೆಯೇ ಕಾಣಿಸುತ್ತಿಲ್ಲ. ಒಂದರ ನಂತರ ಒಂದರಂತೆ ಹೊಸ ಪ್ರಭೇದದ ಕೊರೊನಾ ವೈರಸ್ ನಿಯಂತ್ರಣ ಮೀರಿ ವ್ಯಾಪಿಸುತ್ತಿದೆ.''

''ಹೋದ್ಯಾ ಪಿಶಾಚಿ ಅಂದ್ರೆ ಬಂದೆ ಗವಾಕ್ಷೀಲಿ ಎನ್ನುವಂತೆ ಬೆಳೆಗಳ ಮೇಲೆ ಮತ್ತೆ ಮತ್ತೆ ಮಿಡತೆಗಳ ಹಾವಳಿ ಮುಂದುವರೆಯುತ್ತಿದೆ.''

''ಹೋದ್ಯಾ ಪಿಶಾಚಿ ಅಂದ್ರೆ, ಮತ್ತೆ ಗುಜರಾತ್‌ನತ್ತ ಮುಖ ಮಾಡಿದ 'ವಾಯು' ಚಂಡಮಾರುತ–ಎರಡು ದಿನಗಳ ಹಿಂದಷ್ಟೇ ಗುಜರಾತ್‌ನಲ್ಲಿ ಆತಂಕ ಮೂಡಿಸಿ, ಬಳಿಕ ಪಥ ಬದಲಿಸಿ ನಿರಾಳತೆ ಮೂಡಿಸಿದ್ದ ವಾಯು ಚಂಡಮಾರುತ ಇದೀಗ ಮತ್ತೆ ಗುಜರಾತ್‌ನತ್ತ ಮುಖ ಮಾಡಿದೆ ಎಂದು ಹವಾಮಾನ ಇಲಾಖೆ ಅಧಿಕಾರಿಗಳು ಎಚ್ಚರಿಕೆ ನೀಡಿದ್ದಾರೆ.''

''ಹೋದ್ಯಾ ಪಿಶಾಚಿ ಅಂದ್ರೆ ಬಂದೆ ಗವಾಕ್ಷೀಲಿ ಅನ್ನೋ ಹಾಗೆ ಆತಂಕವಾದಿಗಳ ಒಳನುಸುಳುವಿಕೆ ಅವ್ಯಾಹತವಾಗಿ ನಡೆದೇ ಇದೆ.''

ಇವು ಕೆಲವು ಸ್ಯಾಂಪಲ್ ಅಷ್ಟೇ. ಇಂತಹ ಇನ್ನೂ ನೂರಾರು ವಾಕ್ಯಗಳನ್ನು ಉದಾಹರಿಸಬಹುದು.